ಅ) ಒಂದು ಪೇಳೆ ಈ ಕಾಗಿನಾ ನದಿ ಮೇಲೆ ಎರಡು ಸಾವಿರ ಸಾಲಿನೊಳಗಾಗಿ ಕೆರೆ ನಿರ್ಮಾಣವಾಗಬೇಕಾದರೆ ಈಗಾಗಲೇ ಎಲ್ಲಾ ವಿಧಿ-ವಿಧಾನಗಳು ಪೂರ್ತಿಯಾಗಿ ಕೆಲಸ ಪ್ರಾರಂಭಿಸಿದಲ್ಲಿ ಮಾತ್ರ ಆ ಕೆರೆ ಕೆಲಸ ಏನಾದರೂ ಸ್ವಲ್ಪ ಮಟ್ಟಿಗೆ ಅವಧಿಯಲ್ಲಿ ಆಗುವುದು ಖಚಿತವಷ್ಟೆ?

ಇ) ಒಂದು ಕಡೆ ಏತ ನೀರಾವರಿ ಮಂಜೂರಿಗಾಗಿ ಆತಂಕ ಮಾಡಿ ರೈತರಿಗೆ ನೀರಾವರಿಗೆ ಅನುಕೂಲವಾಗದಂತೆ ಆದರೂ ಕೆರೆ ನಿರ್ಮಾಣ ಮಾಡುವುದು ಖಚಿತವಿಲ್ಲದಂತಾಗಿದೆಯೆಲ್ಲವೇ?

ಈ) ಈ ಪ್ರಕಾರ ರೈತರಿಗೆ ನೀರಾವರಿಗಾಗಿ ಯಾವ ಯೋಜನೆಗಳಿಂದ ಅತಿ ಶೀಘ್ರವಾಗಿ ಯಾವ ಸಾಲಿನಲ್ಲಿ ಅನುಕೂಲ ಮಾಡಿಕೊಡಲಾಗುವುದು.

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಕುರಕುಂಟಿ, ಐಹಾಳ್ ಏತ ನೀರಾವರಿ ಯೋಜನೆಗಳಡಿ ಉದ್ದೇಶಿಲಾಗಿರುವ ಅಚ್ಚುಕಟ್ಟು ಪ್ರದೇಶವು ಕಾಗಿನ ನದಿಗೆ ಅಡ್ಡಲಾಗಿ ಉದ್ದೇಶಿಸಿರುವ ಕಾಗಿನ ಮಧ್ಯಮ ನೀರಾವರಿ ಯೋಜನೆಯ ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ ಈ ಎರಡು ಏತ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕೇ ಇಲ್ಲವೇ ಎಂಬ ಬಗ್ಗೆ ಸುದೀರ್ಘವಾಗಿ ಪರಿಶೀಲಿಸಿ ನಂತರ ನಿರ್ಣಯ ತೆಗೆದುಕೊಳ್ಳಲಾಗುವುದು.

ಆ) ಮತ್ತು ಇ) ಕಾಗಿನ ಮಧ್ಯಮ ನೀರಾವರಿ ಯೋಜನೆಯನ್ನು ಕ್ರಿ.ಶ. 2000 ಇಸವಿಯೊಳಗೆ ಪೂರ್ಣಗೊಳಿಸುವ ಕಾರ್ಯಕ್ರಮವಿದೆ.

ಈ) ಈ ಯೋಜನೆಯ ವರದಿಯನ್ನು ತಯಾರಿಸಿ ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದ ನಂತರವೇ ಇದರ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

ಬಸವ ಕಲ್ಯಾಣದಲ್ಲಿ ಸಿವಿಲ್ ನ್ಯಾಯಾಲಯವನ್ನು ಎಲ್ಲಾ ದಿನಗಳಲ್ಲೂ ನಡೆಸುವ ಬಗ್ಗೆ

701 - ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದಲ್ಲಿ ವಾರದಲ್ಲಿ ಎಷ್ಟು ದಿನ ಸಿವಿಲ್ ನ್ಯಾಯಾಲಯವು ಕೆಲಸ ಮಾಡುತ್ತಿದೆ;

ಆ) ವಾರದಲ್ಲಿ ಎರಡು ದಿನ ಬಾಲ್ಕಿಯಲ್ಲಿ ಆ ನ್ಯಾಯಾಲಯ ನಡೆಯುವುದರಿಂದ ಬಸವ ಕಲ್ಯಾಣದಲ್ಲಿ ಸಿವಿಲ್ ಕಟ್ಟೆಗಳು ನಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹಾಗಿದ್ದಲ್ಲಿ ವಾರದ ಎಲ್ಲಾ ದಿನಗಳಲ್ಲೂ ಸಿವಿಲ್ ನ್ಯಾಯಾಲಯವನ್ನು ಬಸವ ಕಲ್ಯಾಣದಲ್ಲಿ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ವಾರದಲ್ಲಿ 4 ದಿನಗಳು ಸಿವಿಲ್ ನ್ಯಾಯಾಲಯವು ಕೆಲಸ ಮಾಡುತ್ತಿದೆ.

ಆ) ಈ ವ್ಯವಸ್ಥೆಯಿಂದ ತೊಂದರೆಯಾಗುತ್ತಿರುವುದರ ಬಗ್ಗೆ ಯಾವುದೇ ದೂರುಗಳು ಸರ್ಕಾರಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.